# ಅವಿದ್ಯೆಯ ವೈವಿಧ್ಯ

**ಹಿತ್ಲಳ್ಳಿ ಸೂರ್ಯನಾರಾಯಣ ಭಟ್ಟ**

**ಏಕೈಕ ಸತ್ಯವನ್ನು ಒಪ್ಪುವ ಅದ್ವೈತ ಮತದಲ್ಲೇ ಅನೇಕ ವಾದಗಳಿರುವುದು ಸೋಜಿಗವೆನಿಸುತ್ತದೆ. ಇದನ್ನೂ ಅವಿದ್ಯಾವಿಲಾಸವೆಂದೇ ಹೇಳಬೇಕಾಗುತ್ತದೆ. ಈ ವಾದವೈವಿಧ್ಯದ ಸೂಕ್ಷ್ಮಪರಿಚಯ ನಮಗೆ ಈ ಲೇಖನದಲ್ಲಿ ದೊರೆಯುತ್ತದೆ. ಸಂಸ್ಕೃತ ವಿದ್ವಾಂಸರಾದ ಶ್ರೀಸೂರ್ಯನಾರಾಯಣ ಭಟ್ಟರು ಅನೇಕ ಸಂಶೋಧನಾತ್ಮಕ ಗ್ರಂಥಗಳನ್ನು ರಚಿಸಿರುವರು.**

ಆಚಾರ್ಯ ಶಂಕರರು ಪ್ರಸ್ಥಾನತ್ರಯ ಅಥವಾ ಉಪನಿಷತ್ತುಗಳು, ಭಗವದ್ಗೀತೆ ಮತ್ತು ಬ್ರಹ್ಮಸೂತ್ರಗಳಿಗೆ ಭಾಷ್ಯಗಳನ್ನು ಬರೆದಿರುವುದು ಸುಪ್ರಸಿದ್ಧವಾಗಿದೆ. ಇವುಗಳಲ್ಲಿ ಸೂತ್ರಭಾಷ್ಯವನ್ನು ಆಚಾರ್ಯರ ಸಾಕ್ಷಾತ್ ಶಿಷ್ಯರಾದ ಪದ್ಮಪಾದರೂ ಸರ್ವತಂತ್ರಸ್ವತಂತ್ರರಾದ ವಾಚಸ್ಪತಿ ಮಿಶ್ರರೂ ವ್ಯಾಖ್ಯಾನಿಸಿದ್ದಾರೆ. ಪದ್ಮಪಾದರ ವ್ಯಾಖ್ಯೆ, **ಪಂಚಪಾದಿಕೆ**, ಅಪೂರ್ಣವಾಗಿದ್ದು ಅದು ಬ್ರಹ್ಮಸೂತ್ರಗಳಲ್ಲಿ ಮೊದಲಿನ ನಾಲ್ಕು ಸೂತ್ರಗಳ ಭಾಷ್ಯದವರೆಗೆ ಮಾತ್ರ ಉಪಲಬ್ಧವಾಗಿದೆ. ವಾಚಸ್ಪತಿ ಮಿಶ್ರರ ಭಾಮತೀ ಎಂಬ ವ್ಯಾಖ್ಯಾನವು ಸಮಗ್ರವಾಗಿ ದೊರೆಯುತ್ತದೆ.

ಪದ್ಮಪಾದರು ಶ್ರುತಿ-ಸ್ಮೃತಿ ಮುಂತಾದವುಗಳಲ್ಲಿ ಪ್ರಕೃತಿ, ಮಾಯೆ, ಅವ್ಯಾಕೃತ ಎಂದು ಮುಂತಾಗಿ ವ್ಯವಹೃತವಾದ ಅನಾದಿಯೂ ಅನಿರ್ವಾಚ್ಯವೂ ಪರಮೇಶ್ವರನನ್ನು ಆಶ್ರಯಿಸಿರುವುದೂ ಜಡಶಕ್ತಿಯೂ ವಿದ್ಯೆಯ ವಿರೋಧಿಯೂ ಆದ ಅವಿದ್ಯೆಯನ್ನು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಅದನ್ನೇ ಭಾವಾವಿದ್ಯೆ, ಕಾರಣಾವಿದ್ಯೆ, ಮೂಲಾವಿದ್ಯೆ ಎಂದು ಟೀಕಾಕಾರರು ವ್ಯವಹರಿಸಿರುತ್ತಾರೆ. ಪಂಚಪಾದಿಕೆಯ ತರುವಾಯ ವಿವರಣ, ಭಾಮತೀ ಮುಂತಾದ ಎಲ್ಲ ಸಂಸ್ಕೃತ ವ್ಯಾಖ್ಯಾನಗಳಲ್ಲಿಯೂ ಜೀವ-ಈಶ್ವರರ ಸ್ವರೂಪವನ್ನು ನಿರೂಪಿಸುವಾಗ ಮೂಲಾವಿದ್ಯೆಯನ್ನು ಸ್ವೀಕರಿಸಲಾಗಿದೆ. ಆದರೆ ಆಧುನಿಕ ವಿಮರ್ಶಕರಲ್ಲಿ ಕೆಲವರು, ಮುಖ್ಯವಾಗಿ ಹೊಳೆನರಸೀಪುರದ ಸ್ವಾಮಿಗಳು ಹಾಗೂ ಅವರ ಅನುಯಾಯಿಗಳು ಮೂಲಾವಿದ್ಯೆಯನ್ನು ತಿರಸ್ಕರಿಸಿರುತ್ತಾರೆ. ಈ ವಿಷಯದಲ್ಲಿ ಖಂಡನೆ ಹಾಗೂ ಮಂಡನೆ ಕೆಲಕಾಲದವರೆಗೆ ನಡೆದು ಈಗ ವಿವಾದವು ಶಾಂತವಾಗಿದೆ ಎನ್ನಬಹುದು. ಭಾಷಾಂತರದಲ್ಲಿಯೇ ವೇದಾಂತವನ್ನು ತಿಳಿದುಕೊಳ್ಳುವವರು ಹೆಚ್ಚಾಗಿರುವುದು ಇದಕ್ಕೆ ಕಾರಣವಿರಬಹುದು.

ಮೂಲಾವಿದ್ಯೆಯನ್ನು ಸಮರ್ಥಿಸುವವರು ಮುಖ್ಯವಾಗಿ ಸಾಂಪ್ರದಾಯಿಕರು ಹಾಗೂ ಸಂಸ್ಕೃತವ್ಯಾಖ್ಯಾನಗಳನ್ನು ಅನುಸರಿಸುವವರು. ಅದನ್ನು ತಿರಸ್ಕರಿಸುವವರು ಆಚಾರ್ಯ ಶಂಕರರನ್ನು ಮಾತ್ರವೇ ಪ್ರಮಾಣವಾಗಿ ಕಾಣಬೇಕೆನ್ನುವವರು. ಹೊಳೆನರಸೀಪುರದ ಸ್ವಾಮಿಗಳು ಮೂಲಾವಿದ್ಯೆಯನ್ನು ನಿರಾಸ ಮಾಡಿರುವವರಲ್ಲಿ ಮೊದಲಿಗರು ಎಂಬ ಭಾವನೆಯಿದೆ. ಕನ್ನಡದಲ್ಲಿ ಇದು ನಿಜವಾದರೂ ಸಂಸ್ಕೃತದಲ್ಲಿ ವೈಯಾಕರಣನೆಂದು ಹೆಸರು ಮಾಡಿದ ನಾಗೇಶನು ಮೊದಲಿಗನೆಂದು ಹೇಳುತ್ತಾರೆ.

ಭಾಷ್ಯದಲ್ಲಿ ಎಲ್ಲಿಯೂ ಮೂಲಾವಿದ್ಯೆ ಎಂಬ ಶಬ್ದವೇ ಇಲ್ಲವಲ್ಲ! ವಾರ್ತಿಕದಲ್ಲಿಯೂ ಗೌಡಪಾದಕಾರಿಕೆಗಳಲ್ಲಿಯೂ ಆ ಶಬ್ದವೇ ಇಲ್ಲದಿರುವಾಗ ವ್ಯಾಖ್ಯಾನಗಳಲ್ಲಿ ಅದು ಹೇಗೆ ಬಂತು? ಉದಾಹರಣೆಗೆ ಪಂಚದಶಿಯಲ್ಲಿ, **ಅನಾದಿಃ ಅವಿವೇಕೋಽಯಂ ಮೂಲಾವಿದ್ಯೇತಿ ಗಮ್ಯತಾಂ** —"ಅನಾದಿಯಾದ ಅವಿವೇಕವನ್ನೇ ಮೂಲಾವಿದ್ಯೆಯೆಂದು ತಿಳಿಯಬೇಕು" ಎಂದಿದೆ. (ವಾರ್ತಿಕದಲ್ಲಿ ಮೂಲಾವಿದ್ಯೆಯ ಉಲ್ಲೇಖವಿದೆ ಎಂದೇ ಸಾಂಪ್ರದಾಯಿಕರು ಹೇಳುತ್ತಾರೆ!) ಭಾಷ್ಯದಲ್ಲಿ ಅಧ್ಯಾಸವನ್ನೇ ಅವಿದ್ಯೆಯೆಂದು ತಿಳಿಸಿದ್ದಾರೆ. ಸಮಸ್ತ ವ್ಯವಹಾರಕ್ಕೂ ಅಧ್ಯಾಸವೇ ಮೂಲ. ಅಧ್ಯಾಸವೆಂದರೆ ತಪ್ಪು ತಿಳಿವಳಿಕೆ. ಸಕಲ ಪ್ರಪಂಚಕ್ಕೂ ಅದೇ ಕಾರಣವಲ್ಲದೆ ಆ ಅಧ್ಯಾಸಕ್ಕೆ ಬೇರೊಂದು ಕಾರಣವಿಲ್ಲ. ಅಧ್ಯಾಸವು ಎಲ್ಲರ ಅನುಭವದಲ್ಲಿಯೂ ಇದೆ. ಆದರೆ ಅದಕ್ಕೆ ಕಾರಣವಿರುವುದು ಯಾರ ಅನುಭವಕ್ಕೂ ಬರುವುದಿಲ್ಲ! ಅವಿದ್ಯೆ ಅಥವಾ ಅಧ್ಯಾಸವನ್ನು ಮಾಯೆಯ ಕಾರ್ಯವೆಂದು ಹೇಳಿದರೆ ಮಾಯೆಯನ್ನು ಅವಿದ್ಯಾಕಲ್ಪಿತವೆಂದು ಹೇಳುವ ಭಾಷ್ಯಕ್ಕೆ ವಿರೋಧವುಂಟಾಗುತ್ತದೆ. ಅಧ್ಯಾಸಕ್ಕೆ ಮೊದಲೇ ಮಾಯೆಯಿರುವುದಾದರೆ ಅದು ಅಧ್ಯಾಸದ ಕಾರ್ಯವಾಗದಿರುವುದರಿಂದ ಬ್ರಹ್ಮಜ್ಞಾನವುಂಟಾದಮೇಲೂ ನಾಶವಾಗದೆ ಹೋಗಬೇಕಾಗುತ್ತದೆ! ಭಾವರೂಪವಾದ ಮಾಯೆಯಿಂದ ಬ್ರಹ್ಮವು ಸದ್ವಿತೀಯವೆನಿಸಿ ಅದ್ವೈತ ಸಿದ್ಧಾಂತವೇ ಭಗ್ನವಾದೀತು. ಇದು ಮೂಲಾವಿದ್ಯೆಯನ್ನು ಒಪ್ಪದವರ ವಾದ.

ಇದಕ್ಕೆ ಸಾಂಪ್ರದಾಯಿಕರು ಹೇಳುತ್ತಾರೆ: ಒಂದು ವಸ್ತುವಿಗೆ ಸೂಕ್ಷ್ಮ ಮತ್ತು ಸ್ಥೂಲ ಎಂಬ ಎರಡು ಅವಸ್ಥೆಗಳಿರುತ್ತವೆ. ಸೂಕ್ಷ್ಮಾವಸ್ಥೆಯು ಕಾರಣವೆಂದೂ ಸ್ಥೂಲಾವಸ್ಥೆಯು ಕಾರ್ಯವೆಂದೂ ಹೇಳುತ್ತಾರೆ. ಗಾಢ ನಿದ್ರೆಯಲ್ಲಿ ಕಾರಣವಾದ ಅಜ್ಞಾನವಿರುತ್ತದೆ. ಜಾಗ್ರತ್ತಿನಲ್ಲಿ ಅದರ ಕಾರ್ಯವಾದ ಅವಿದ್ಯೆ ಎಲ್ಲರ ಅನುಭವಕ್ಕೆ ಬರುತ್ತದೆ. ಇದು **ರಾಹುಗ್ರಸ್ತ ದಿವಾಕರೇಂದು ಸದೃಶೋ**—"ರಾಹುವಿನಿಂದ ಮರೆಯಾಗುವ ಸೂರ್ಯಚಂದ್ರರಂತೆ" ಎಂಬ **ದಕ್ಷಿಣಾಮೂರ್ತಿ ಸ್ತೋತ್ರ**ದಲ್ಲಿಯೂ ಅದರ ವ್ಯಾಖ್ಯಾನವಾದ **ಮಾನಸೋಲ್ಲಾಸ**ದಲ್ಲಿಯೂ ಭಾಷ್ಯಕಾರರಿಂದಲೇ ಉಕ್ತವಾಗಿದೆ. ಅವರ ಶಿಷ್ಯರಿಂದಲೂ ವ್ಯಾಖ್ಯಾತವಾಗಿದೆ. **ವಿಶ್ವಮಾಯಾನಿವೃತ್ತಿಃ** ಎಂಬ ಶ್ರುತಿಯಲ್ಲಿ ಮಾಯೆಯು ತತ್ತ್ವಜ್ಞಾನದಿಂದ ನಿವಾರಿಸಲ್ಪಡುತ್ತದೆ ಎಂದು ಹೇಳಿದೆ.

ಅದ್ವೈತ ವೇದಾಂತದರ್ಶನದಲ್ಲಿ ಜೀವಿಯೂ ಪರಮಾತ್ಮನೂ ಪಾರಮಾರ್ಥಿಕವಾಗಿ ಒಂದೇ ಆದರೂ ವ್ಯಾವಹಾರಿಕವಾಗಿ ಬೇರೆ. ಪರಮಾತ್ಮನು ಅವಿದ್ಯೆಯಿಂದ ಜೀವಾತ್ಮನಾಗಿ ಕಾಣುವುದನ್ನು ವೇದಾಂತಿಗಳು ಮುಖ್ಯವಾಗಿ ಮೂರು ವಿಧವಾದ ಉದಾಹರಣೆಗಳಿಂದ ಸಮರ್ಥಿಸುತ್ತಾರೆ. ಒಂದು ಆಚಾರ್ಯ ವಾಚಸ್ಪತಿ ಮಿಶ್ರರ ವಿವರಣೆ, ಇನ್ನೊಂದು ಪ್ರಕಾಶಾತ್ಮ ಯತಿಗಳದು ಹಾಗೂ ಮತ್ತೊಂದು ಆಚಾರ್ಯ ಸುರೇಶ್ವರರದು. ಮೊದಲನೆಯದು ಅವಚ್ಛೇದ ವಾದ ಎಂದು ಪ್ರಸಿದ್ಧವಾಗಿದ್ದು ಭಾಮತೀ ಎಂಬ ಮಹಾ ನಿಬಂಧದಲ್ಲಿ ಇದರ ವಿವರಣೆಯನ್ನು ಕಾಣಬಹುದು. ಎರಡನೆಯದಾದ ಪ್ರತಿಬಿಂಬ ವಾದವು ವಿವರಣ ಅಥವಾ ಪಂಚಪಾದಿಕಾ ವಿವರಣದಲ್ಲಿ ವಿವರಿಸಲ್ಪಟ್ಟಿದೆ. ಮೂರನೆಯದಾದ ಆಭಾಸವಾದವು ವಾರ್ತಿಕಗಳಲ್ಲಿ ವರ್ಣಿಸಲ್ಪಟ್ಟಿದೆ. ಈ ವಾದಗಳಿಗೆ ಮೂಲ ಆಚಾರ್ಯ ಶಂಕರರ ಭಾಷ್ಯದಲ್ಲಿಯೂ ಇತರ ಗ್ರಂಥಗಳಲ್ಲಿಯೂ ಇದೆ. ವಾಚಸ್ಪತಿ ಮಿಶ್ರರಿಗಿಂತ ಮುಂಚೆಯೇ ಮಂಡನ ಮಿಶ್ರರ ಬ್ರಹ್ಮಸಿದ್ಧಿಯಲ್ಲಿಯೇ ಅವಚ್ಛೇದ ವಾದದ ಸೂಚನೆಯಿದೆ. ಪ್ರಕಾಶಾತ್ಮ ಯತಿಗಳು ತಮಗಿಂತ ಹಿಂದಿನ ಸರ್ವಜ್ಞಾತ್ಮ ಮುನಿಗಳ ಸಂಕ್ಷೇಪ ಶಾರೀರಕ ಎಂಬ ಪದ್ಯ ಗ್ರಂಥದಿಂದ ಪ್ರತಿಬಿಂಬ ವಾದವನ್ನು ಸಂಗ್ರಹಿಸಿದ್ದಾರೆ. ಆದರೆ ಆ ವಾದಗಳ ಮೇಲೆ ಬರಬಹುದಾದ ಆಕ್ಷೇಪಗಳು, ಅವುಗಳ ಸಮಾಧಾನ, ಬೇರೆಯ ವಾದಗಳ ಮೇಲೆ ಹೊರಿಸಬಹುದಾದ ಆರೋಪಗಳು, ಒಂದು ವಾದದ ಸ್ವೀಕಾರದಿಂದ ಸಿಗಬಹುದಾದ ಪ್ರಯೋಜನ— ಮೂಲಗ್ರಂಥಗಳಲ್ಲಿ ಕಾಣುವುದಿಲ್ಲ. ಆಕ್ಷೇಪ-ಸಮಾಧಾನ, ಆರೋಪ ಮತ್ತು ಪ್ರಯೋಜನ ವಾಚಸ್ಪತಿ ಮಿಶ್ರರೇ ಮೊದಲಾದ ವ್ಯಾಖ್ಯಾತೃ ವಿದ್ವಾಂಸರ ಗ್ರಂಥಗಳಲ್ಲಿ ಸಂಗ್ರಹವಾಗಿಯಾದರೂ ದೊರೆಯುವುದರಿಂದಲೇ ಅವರನ್ನು ಆಯಾ ವಾದಗಳ ಪ್ರವರ್ತಕರೆನ್ನಬಹುದು.

## ೧. ಅವಚ್ಛೇದ ವಾದ

ಮಂಡನಮಿಶ್ರರು ಬ್ರಹ್ಮಸಿದ್ಧಿಯ ಪ್ರಥಮ ಕಾರಿಕೆಯಲ್ಲಿಯೇ (ಪರಮಾನಂದವನ್ನೂ ಲೌಕಿಕ ಆನಂದವನ್ನೂ) ಅವಚ್ಛೇದಾತ್ ಎಂದು ಹೇಳಿ ವ್ಯಾವಹಾರಿಕ ಭೇದವನ್ನು ಸಮರ್ಥಿಸುತ್ತಾರೆ. ಲೌಕಿಕ ಆನಂದಕ್ಕೆ ಮಿತಿಯಿದೆ. ಆದರೆ ಪರಮಾನಂದವು ಅಮಿತ ಅಥವಾ ಅಪರಿಮಿತವಾಗಿದೆ. ಆನಂದವೇ ಜೀವ-ಬ್ರಹ್ಮರ ಸ್ವರೂಪವಾದರೂ, ಜೀವಿಯ ಆನಂದಕ್ಕೆ ಮಿತಿಯಿದೆಯಲ್ಲವೇ? ಬ್ರಹ್ಮಸಿದ್ಧಿಯಲ್ಲಿಯೇ ಮುಂದೆ ಆಕಾಶದ ಉದಾಹರಣೆಯೊಂದಿಗೆ ಜೀವ-ಬ್ರಹ್ಮ ಭೇದವನ್ನು ವಿವರಿಸಲಾಗಿದೆ. ಬ್ರಹ್ಮವು ಬೇರೆ ಎಂದು ಕಾಣಲು ಅವಿದ್ಯೆಯೇ ಕಾರಣ. ಅವಿದ್ಯೆಯು ಇಲ್ಲವಾದರೆ, ಜೀವ-ಬ್ರಹ್ಮರಿಗೆ ಯಾವ ಭೇದವೂ ಇರುವುದಿಲ್ಲ. ಮಡಕೆ ಒಡೆದು ಹೋದಮೇಲೆ, ಮಹಾಕಾಶವೊಂದೇ ಇರುವುದಲ್ಲದೆ, ಮಡಕೆಯ ಒಳಗಿನ ಅವಕಾಶವು ಬೇರೆಯಾಗಿ ಕಾಣುವುದಿಲ್ಲವಷ್ಟೇ?

ಆಚಾರ್ಯ ಶಂಕರರು ಈ ವಾದವನ್ನು ಬ್ರಹ್ಮಸೂತ್ರ ಭಾಷ್ಯದಲ್ಲಿ ಹತ್ತಾರು ಸ್ಥಳಗಳಲ್ಲಿ ಉದಾಹರಿಸಿದ್ದಾರೆ. ಪರಮಾತ್ಮನನ್ನೇ, ಇಂದ್ರಿಯ ಮುಂತಾದವುಗಳಿಂದ ಪರಿಮಿತನಾಗಿರುವುದರಿಂದ, ಜೀವಿಯೆಂದು ತಿಳಿವಳಿಕೆಯಿಲ್ಲದವರು ಕರೆಯುತ್ತಾರೆ. ಆಕಾಶವೇ ಮಡಕೆ, ಕುಡಿಕೆ ಮುಂತಾದವುಗಳಲ್ಲಿ ಇರುವಾಗ ಚಿಕ್ಕದಾಗಿ ಕಾಣುವಂತೆ ಎಂದು ೧.೨.೬ರ ಸೂತ್ರಭಾಷ್ಯದಲ್ಲಿದೆ.

ವಾಚಸ್ಪತಿ ಮಿಶ್ರರು ಸೂತ್ರಭಾಷ್ಯದಲ್ಲಿರುವ ಆಕಾಶದ ಉದಾಹರಣೆಯನ್ನು ಹೀಗೆ ವಿವರಿಸುತ್ತಾರೆ: ಮಡಕೆಯ ಆಕಾಶವು ಆಕಾಶದಿಂದ ಬೇರೆಯಲ್ಲ. ಆದರೆ ಮಡಕೆಯಿರುವವರೆಗೂ ಅದು ಬೇರೆ ಆಕಾಶದಂತೆ ಮುಂದುವರೆಯುತ್ತದೆ. ಇದು ಮಡಕೆಯ ಆಕಾಶ ಎಂಬುದನ್ನು ಮಡಕೆಯನ್ನು ನೋಡಿ ಆಕಾಶಕ್ಕಿಂತ ಬೇರೆಯಾಗಿ ತಿಳಿದುಕೊಳ್ಳಬಹುದು. ಹೀಗೆಯೇ ಜೀವ-ಪರಮಾತ್ಮರ ಭೇದ. ಅನಾದಿಯಾದ ಅವಿದ್ಯೆಯಿಂದ ಜೀವನ ಕಲ್ಪನೆ. ಅವನು ನಿಜವಾಗಿಯೂ ಪರಮಾತ್ಮನಿಂದ ಬೇರೆಯಲ್ಲ. ಅವಿದ್ಯೆಯ ಆವಿರ್ಭಾವ ಮತ್ತು ತಿರೋಭಾವದಿಂದ ಜೀವನ ಆವಿರ್ಭಾವ ಹಾಗೂ ತಿರೋಭಾವವಾಗುತ್ತದೆ.

ಅವಚ್ಛೇದ ವಾದದಲ್ಲಿ ಬ್ರಹ್ಮದಂತೆ ಜೀವನೂ ಸತ್ಯ. ಆದರೆ ಆಭಾಸ ವಾದದಲ್ಲಿ ಜೀವಿ ಕಲ್ಪಿತ ಅಥವಾ ಮಿಥ್ಯೆ. ಅದನ್ನು ಸ್ವೀಕರಿಸಿದರೆ ಮುಕ್ತಿಯಲ್ಲಿ ಜೀವಿಯು ನಾಶವಾಗಿ ಇಲ್ಲವೆ ಇಲ್ಲ ಎಂದಾಗುತ್ತದೆ. ಅಲ್ಲದೆ, ಜೀವಿಯು ಆಭಾಸಮಾತ್ರ ಎಂದು ಹೇಳಿದರೆ ಬೌದ್ಧರಿಗೂ ವೇದಾಂತಿಗಳಿಗೂ ವ್ಯತ್ಯಾಸವೇನು ಬಂತು? ಅವರು ಹೇಳಿದ್ದನ್ನು ವೇದಾಂತಿಗಳೂ ಹೇಳಿದಂತಾಯಿತು. ಅವರು ಮುಕ್ತಿಯಲ್ಲಿ ಶೂನ್ಯವನ್ನು ಅಂಗೀಕರಿಸುತ್ತಾರೆ. ಆಭಾಸ ವಾದವನ್ನು ಸ್ವೀಕರಿಸಿದರೆ, ಅವರಂತೆ ಶೂನ್ಯ ವಾದವನ್ನೇ ಸ್ವೀಕರಿಸಬೇಕಾದೀತು. ಈ ಕಾರಣದಿಂದ ಜೀವಿಯಾಗಲಿ ಬ್ರಹ್ಮವಾಗಲಿ ಸದ್ ಎಂದೂ ಒಂದೇ ಎಂದೂ ಸ್ವೀಕರಿಸಿ, ಅವಚ್ಛೇದ ಅಥವಾ ವ್ಯಾವೃತ್ತಿಯನ್ನು ವ್ಯಾವಹಾರಿಕವಾಗಿ ಹೇಳುವುದೇ ಸೂಕ್ತ ಎನ್ನಬಹುದು.

## ೨. ಪ್ರತಿಬಿಂಬ ವಾದ

ಬ್ರಹ್ಮಸೂತ್ರಭಾಷ್ಯವನ್ನು ಆಚಾರ್ಯ ಶಂಕರರ ಸಾಕ್ಷಾತ್ ಶಿಷ್ಯರಾದ ಪದ್ಮಪಾದರು (೮ ನೇ ಶತಮಾನ) ಪಂಚಪಾದಿಕಾ ಎಂಬ ಹೆಸರಿನ ವ್ಯಾಖ್ಯಾನದಿಂದ ವಿವರಿಸಿದ್ದಾರೆ. ಪಂಚಪಾದಿಕೆಯನ್ನು ಪ್ರಕಾಶಾತ್ಮಯತಿಗಳು(೧೨ನೇ ಶತಮಾನ) ವಿವರಣ ಎಂಬ ವ್ಯಾಖ್ಯಾನದಿಂದ ವಿಸ್ತರಿಸಿದ್ದಾರೆ. ಪಂಚಪಾದಿಕೆಗೂ ವಿವರಣೆಗೂ ಮಧ್ಯವರ್ತಿ(೧೧ನೇ ಶತಮಾನ)ಯಾದ ಸಂಕ್ಷೇಪ ಶಾರೀರಕ ಎಂಬ ಗ್ರಂಥವಿದೆ. ಅದನ್ನು ಸರ್ವಜ್ಞಾತ್ಮಾ ಎಂಬ ಮುನಿಗಳು ಬರೆದಿದ್ದಾರೆ. ಈ ಮೂರು ಗ್ರಂಥಗಳು ಪ್ರತಿಬಿಂಬ ವಾದಕ್ಕೆ ಮುಖ್ಯವಾದ ಅವಲಂಬನೆಯೆನ್ನಬಹುದು.

ಬ್ರಹ್ಮಸೂತ್ರದಲ್ಲಿಯೇ (೩.೨.೨೦) ಪ್ರತಿಬಿಂಬ ವಾದದ ಸೂಚನೆಯಿದೆ. ಅದರ ಭಾಷ್ಯದಲ್ಲಿಯೇ ಅದನ್ನು ವಿವರಿಸ

ಲಾಗಿದೆ. ನೀರಿನಲ್ಲಿರುವ ಸೂರ್ಯ ಪ್ರತಿಬಿಂಬವು ಜಲವು ವೃದ್ಧಿಯಾದಾಗ ವೃದ್ಧಿಯಾಗುತ್ತದೆ, ಜಲವು ಕಡಿಮೆಯಾದಾಗ ಕಡಿಮೆಯಾಗುತ್ತದೆ, ಜಲವು ಹರಿಯುವಾಗ ಚಲಿಸುತ್ತದೆ, ಜಲವು ಬೇರೆಯಾದಾಗ ಬೇರೆಯಾಗುತ್ತದೆ. ಆದರೆ ಸೂರ್ಯನಿಗೆ ಇವಾವುವೂ ಅನ್ವಯಿಸುವುದಿಲ್ಲ. ಅದರಂತೆ ಪರಮಾತ್ಮನೂ ಶರೀರದಲ್ಲಿ ಕಾಣುತ್ತಿರುವಾಗ, ಶರೀರವು ದೊಡ್ಡದಾದರೆ ದೊಡ್ಡವನಾಗುತ್ತಾನೆ, ಶರೀರವು ಚಿಕ್ಕದಾದರೆ ಚಿಕ್ಕವನಾಗುತ್ತಾನೆ, ಶರೀರವು ಚಲಿಸುವಾಗ ಚಲಿಸುತ್ತಾನೆ, ಶರೀರವು ಬೇರೆಯಾದಾಗ ಬೇರೆಯಾಗುತ್ತಾನೆ. ಆದರೆ ಪರಮಾತ್ಮನಿಗೆ ಈ ಯಾವ ಬದಲಾವಣೆಗಳೂ ಇಲ್ಲ.

ಹೀಗೆ ಸೂತ್ರದಲ್ಲಿಯೇ ಇರುವುದರಿಂದ ಪ್ರತಿಬಿಂಬವಾದವು ವೇದಾಂತದ ಸಿದ್ಧಾಂತವೆನ್ನಬಹುದು. **ಆಕಾಶವತ್** ಎಂದು ಮುಂತಾದ ಶ್ರುತಿಯಲ್ಲಿಯೇ ಇರುವುದರಿಂದ ಅವಚ್ಛೇದವಾದವನ್ನೂ ಉಪೇಕ್ಷಿಸುವಂತಿಲ್ಲ. ಪ್ರತಿಬಿಂಬವಾದವೂ ಶ್ರುತಿಯಲ್ಲಿಯೇ ಇರುವ ಕಾರಣ, ಸೂತ್ರದಲ್ಲಿ ವಿಚಾರಕ್ಕಾಗಿ ಉಲ್ಲೇಖಿಸಲಾಗಿದೆ. ಯಾರಿಗೆ ಯಾವ ಶ್ರುತಿಯು ಸಮಂಜಸವೆನಿಸುವುದೋ ಅದನ್ನು ಸ್ವೀಕರಿಸಬಹುದು. ಆತ್ಮಜ್ಞಾನವನ್ನು ಪಡೆಯುವುದು ಮುಖ್ಯವೇ ಹೊರತು ಶ್ರುತಿಯ ವಾಕ್ಯಗಳು ಮುಖ್ಯವಲ್ಲ. ಒಬ್ಬನಿಗೆ ಆಕಾಶ, ಘಟಾಕಾಶ ಮುಂತಾದ ಅವಚ್ಛೇದ ವಾದವು ಮನಸ್ಸಿಗೆ ಸರಿಯೆಂದು ತೋರಬಹುದು. ಆದರೆ ಇನ್ನೊಬ್ಬನಿಗೆ ಸೂರ್ಯಮಂಡಲ ಮತ್ತು ನದಿಯ ನೀರು, ಕನ್ನಡಿ ಹಾಗೂ ಅದರಲ್ಲಿ ಕಾಣುವ ಮೋರೆ ಮುಂತಾದ ಪ್ರತಿಬಿಂಬ ವಾದದ ಉದಾಹರಣೆ ಸಮಂಜಸವೆನಿಸಬಹುದು. ಈ ಕಾರಣದಿಂದಲೇ ಆಚಾರ್ಯ ಸುರೇಶ್ವರರು, ಪ್ರಕ್ರಿಯೆ ಯಾವುದಾದರೂ ಆಗಲಿ ಸಿದ್ಧಾಂತವನ್ನು ತಿಳಿಯಲು ಸುಲಭವಾದುದನ್ನು ಆಯ್ಕೆ ಮಾಡಿಕೊಳ್ಳಬಹುದೆಂದು ವಾರ್ತಿಕದಲ್ಲಿ ತಿಳಿಸುತ್ತಾರೆ.

೩. ಆಭಾಸ ವಾದ

ಆಚಾರ್ಯ ಸುರೇಶ್ವರರು ಇದರ ಪ್ರವರ್ತಕರು. ಆಕಾಶದಲ್ಲಿ ಕಂಗೊಳಿಸುತ್ತಿರುವ ಸೂರ್ಯನು ಜಲಪಾತ್ರೆಗಳಲ್ಲಿಯೂ ಎಲೆಗಳಲ್ಲಿ ತೊಟ್ಟಿಕ್ಕುತ್ತಿರುವ ಜಲಬಿಂದುಗಳಲ್ಲಿಯೂ ಪ್ರಕಾಶಿಸುತ್ತಾನೆ. ಇದರಿಂದ ಜೀವಬ್ರಹ್ಮರ ಭೇದವು ಸ್ಪಷ್ಟವಾಗುತ್ತದೆ. ಬ್ರಹ್ಮವು ಬಿಂಬವೇ. ಅಸಂಖ್ಯಾತ ಜೀವಿಗಳು ಅದರ ಪ್ರತಿಬಿಂಬವೆನ್ನಬಹುದು. ಪ್ರತಿಬಿಂಬವು ಸತ್ಯವಲ್ಲ. ಅದು ಮಿಥ್ಯೆ. ಬಿಂಬವಾದ ಬ್ರಹ್ಮವು ಅಜ್ಞಾನ ಅಥವಾ ಮಾಯೆಯಲ್ಲಿ ಪ್ರತಿಬಿಂಬಿತವಾಗಿ ಜಗತ್ತಿಗೆ ಕಾರಣವಾಗುತ್ತದೆ. ಬುದ್ಧಿಯಲ್ಲಿ ಪ್ರತಿಬಿಂಬಿತವಾಗಿ ಜೀವಿಯೆನಿಸುತ್ತದೆ. ಬುದ್ಧಿಯು ಒಂದೊಂದು ಶರೀರಕ್ಕೂ ಬೇರೆಯಾಗಿರುವುದರಿಂದ ಚೈತನ್ಯವೂ ಬೇರೆಯಾಗಿರುವಂತೆ ಕಾಣುತ್ತದೆ. ಅವಿದ್ಯೆಯು ಬ್ರಹ್ಮಜ್ಞಾನದಿಂದ ನಿವೃತ್ತವಾದರೆ ಈ ಭೇದವಿರುವುದಿಲ್ಲ. ಶಾಂಕರದರ್ಶನದಲ್ಲಿ ಭಾಷ್ಯವನ್ನು ಅನುಸರಿಸಿ ನೋಡಿದರೆ ಸುರೇಶ್ವರರ ಮತವು ಬೇರೆಯಾಗುವುದಿಲ್ಲ. ಭಗವತ್ಪಾದರ ಮತ್ತು ಸೂತ್ರಕಾರರ ಮತವನ್ನೇ ಸುರೇಶ್ವರರು ಹೇಳುತ್ತಾರೆ. ಆಭಾಸ ಏವ ಚ ಎಂದು ಬ್ರಹ್ಮಸೂತ್ರವಿದೆ. ಹಾಗೂ ಅದರ ಮೇಲೆ ಆಚಾರ್ಯ ಶಂಕರರ ಭಾಷ್ಯವೂ ಇದೆ.

ವಿವರಣಕಾರರು ಬಿಂಬ ಮತ್ತು ಪ್ರತಿಬಿಂಬ ಬೇರೆಯಲ್ಲ ಎನ್ನುತ್ತಾರೆ. ಅಲ್ಲದೆ ಪ್ರತಿಬಿಂಬವು ಬಿಂಬರೂಪದಿಂದ ಸತ್ಯವೆಂದೂ ಸಾಧಿಸುತ್ತಾರೆ. ಬಿಂಬದಲ್ಲಿ ಪ್ರತಿಬಿಂಬತ್ವವು ಕಲ್ಪಿತ. ಇದನ್ನು ಮಧುಸೂದನ ಸರಸ್ವತಿಗಳು ವಿಮರ್ಶಿಸಿ ವಿವರಣಕಾರರ ಬಿಂಬ-ಪ್ರತಿಬಿಂಬವಾದಕ್ಕೂ ಸುರೇಶ್ವರರ ಆಭಾಸವಾದಕ್ಕೂ ವ್ಯತ್ಯಾಸವಿದೆ ಎಂದು ತಿಳಿಸುತ್ತಾರೆ. ಪ್ರತಿಬಿಂಬ ವಾದದಲ್ಲಿ ಪ್ರತಿಬಿಂಬವನ್ನೂ ಸತ್ಯ ಎಂದು ಪರಿಗಣಿಸಲಾಗಿದ್ದು, ಆಭಾಸ ವಾದದಲ್ಲಿ ಅದನ್ನು ಮಿಥ್ಯೆ ಎಂದು ಹೇಳಲಾಗಿದೆ. ಆದರೆ ಇವೆರಡೂ ವಾದಗಳಲ್ಲಿ ಶುದ್ಧ ಚಿತ್‌ಸ್ವರೂಪವೇ ಮುಕ್ತಿಯಾದುದರಿಂದ ಮುಕ್ತಿಫಲದಲ್ಲಿ ವ್ಯತ್ಯಾಸವೇನೂ ಇಲ್ಲ.

ಪರಮಾತ್ಮನು ಸೃಷ್ಟಿಮಾಡಿದ ಮೇಲೆ ಶರೀರವನ್ನು ಪ್ರವೇಶಿಸಿದನು ಎಂದು ಶ್ರುತಿಯಲ್ಲಿ ಹೇಳಿರುವುದು ಅವನು ಪ್ರವೇಶಿಸಿದನು ಎಂಬರ್ಥದಲ್ಲಿ ಅಲ್ಲ. ನೀರಿನಲ್ಲಿ ಸೂರ್ಯನು ಕಾಣುವಾಗ ಬಿಂಬ-ಪ್ರತಿಬಿಂಬಗಳು ಬೇರೆಯಾಗಿ ಎರಡು ಕಡೆಗಳಲ್ಲಿ ತೋರುವಂತೆ ಪರಮಾತ್ಮನೂ ತೋರುತ್ತಾನೆ ಎಂಬ ಅರ್ಥದಲ್ಲಿ! ಇದರಿಂದ ಪರಮಾತ್ಮನ ಉಪಲಬ್ಧಿಯ ಸ್ಥಾನವು ನಿಶ್ಚಿತವಾಗುತ್ತದೆ.

ಯಾವುದೇ ವಾದವೂ ಪೂರ್ಣವಾದ ಬ್ರಹ್ಮತತ್ತ್ವವನ್ನು ಪ್ರತಿನಿಧಿಸುವುದಿಲ್ಲ. ಈ ಕಾರಣದಿಂದಲೇ ಆಚಾರ್ಯ ಶಂಕರರು ಎಲ್ಲಾ ವಾದಗಳನ್ನೂ ಸಮಾನವಾಗಿ ಸಮರ್ಥಿಸಿದ್ದಾರೆ. ವಾದಗಳ ಪ್ರವರ್ತಕರೆಂದು ಪ್ರಸಿದ್ಧರಾದ ಆಚಾರ್ಯರೂ ಅವುಗಳ ಬಗ್ಗೆ ಆಗ್ರಹವನ್ನೇನೂ ಇಟ್ಟುಕೊಂಡಿರುವುದಿಲ್ಲ. ಎಲ್ಲರೂ ಪರಮಾತ್ಮನನ್ನು ಅರಿತುಕೊಳ್ಳಲಿ, ಎಂಬಲ್ಲಿ ಅವರೆಲ್ಲರ ಆಗ್ರಹವು ಕೊನೆಗೊಳ್ಳುತ್ತದೆ.

**ಅವಿದ್ಯೆಯೇ ಪ್ರತ್ಯೇಕತೆಯ ಭಾವನೆಗೆ ಮೂಲ**

**ಅನಂತವಾದದ್ದು ಅಳುತ್ತದೆ, ದುಃಖಿಸುತ್ತದೆ ಮತ್ತು ಅದು ಸಾಂತವಾದದ್ದು ಎಂದು ಭಾವಿಸುವುದೇ ಮೂಲಭೂತ ಅವಿದ್ಯೆ. ಇದೇ ಎಲ್ಲ ಅಜ್ಞಾನದ ಮೂಲ. ಅಮೃತಾತ್ಮರೂ, ನಿತ್ಯಶುದ್ಧರೂ ಪರಿಪೂರ್ಣರೂ ಆದ ನಾವು ಅಲ್ಪ ಮನಸ್ಸುಳ್ಳವರು, ಕ್ಷುದ್ರದೇಹಿಗಳು ಎಂದು ಭಾವಿಸಿದ್ದೇವೆ. ಇದೇ ಎಲ್ಲಾ ಸ್ವಾರ್ಥದ ತವರು. ನಾನೊಂದು ಸಣ್ಣ ದೇಹವೆಂದು ಭಾವಿಸಿದೊಡನೆ ನಾನು ಅದನ್ನು ಸುಂದರವಾಗಿ ಇಟ್ಟಿರಬೇಕು, ರಕ್ಷಿಸಬೇಕು, ಇದನ್ನು ಇತರೆ ದೇಹಗಳಿಗೆ ತೊಂದರೆ ಕೊಟ್ಟಾದರೂ ಮಾಡಬೇಕು ಎನಿಸುವುದು. ಆಗ ನಾನು ಮತ್ತು ನೀವು ಬೇರೆ ಆಗುವೆವು. ಈ ಪ್ರತ್ಯೇಕತೆಯ ಭಾವನೆ ಬಂದೊಡನೆಯೇ ಅದು ಎಲ್ಲಾ ತೊಂದರೆಗಳಿಗೆ ಮತ್ತು ದುಃಖಕ್ಕೆ ಹೇತುವಾಗುವುದು.**

**—ಸ್ವಾಮಿ ವಿವೇಕಾನಂದ**